9.	ಬೆಳ್ತಂಗಡಿ	1. ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆ	25.00	ರಾಜ್ಯ ಹೆದ್ದಾರಿ
		2. ಬೆಳ್ತಂಗಡಿ ಕಲ್ಲೂರು ರಸ್ತೆ	16.00	ಮುಖ್ಯ ಜಿಲ್ಲಾ ರಸ್ತೆ
		3. ವೇಣೂರು ಅಂದಿಂಜ ನಾರಾವಿ ರಸ್ತೆ	15.50	ಮುಖ್ಯ ಜಿಲ್ಲಾ ರಸ್ತೆ
10.	ಕುಂದಾಪುರ	1. ಬ್ರಹ್ಮಾವರ ಜನ್ನಾಡಿ ರಸ್ತೆ	9.70	ಮುಖ್ಯ ಜಿಲ್ಲಾ ರಸ್ತೆ
		2. ಹಾಲಾಡಿ ಅಮಾಸ್‌ಬೈಲು ರಸ್ತೆ	13.00	ಮುಖ್ಯ ಜಿಲ್ಲಾ ರಸ್ತೆ
		3. ಕೋಟಗೋಳಿಯಂಗಡಿ ರಸ್ತೆ	16.40	ಮುಖ್ಯ ಜಿಲ್ಲಾ ರಸ್ತೆ

ಒಟ್ಟು ಜಿಲ್ಲಾ ಮುಖ್ಯ ರಸ್ತೆಯಾಗಿ ಮೇಲ್ದರ್ಜೆಗೇರಿಸಲಾದ ರಸ್ತೆಗಳ ಉದ್ದ 203.70 ಕಿ.ಮೀ.
ಒಟ್ಟು ರಾಜ್ಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಲಾದ ರಸ್ತೆಗಳ ಉದ್ದ 83.30 ಕಿ.ಮೀ.
ಒಟ್ಟು 287.00 ಕಿ.ಮೀ.

ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತಿಗಳಿಗೆ ನಾಮ ನಿರ್ದೇಶನ ಮಾಡುವ ಬಗ್ಗೆ.

1075 (1451) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳ ಆಡಳಿತಾಧಿಕಾರಿಯವರಿಗೆ ಸಲಹೆ ಸೂಚನೆ ಕೊಡಲು ಸದಸ್ಯರ ನಾಮ ನಿರ್ದೇಶನ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ;

ಆ) ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು ;

ಇ) ಹಾಗಿಲ್ಲದಿದ್ದಲ್ಲಿ ಇವುಗಳಲ್ಲಿ ನಡೆಯುವ ಅವ್ಯವಹಾರವನ್ನು ತಡೆಯಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲಾಗುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ಕಂದಾಯ ಸಚಿವರು) :

ಅ) ಪರಿಶೀಲಿಸಲಾಗುವುದು.

ಆ) ಪರಿಶೀಲಿಸಲಾಗುವುದು.

ಇ) ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿ ಕಾಯ್ದೆಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

ಮುಳಬಾಗಿಲು ತಾಲ್ಲೂಕಿನ ನಾಚಾಂಕಳ್ಳಿ ಫೀಡರ್ ಚಾನಲ್ ಬಗ್ಗೆ :

1077 (1662) ಶ್ರೀ ಎಂ. ಪಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಸಣ್ಣನೀರಾವರಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ದುಗ್ಗ ಸಂದ್ರ ಮತ್ತು ಬೈರಕೂರ್ ಹೋಬಳಿಗಳಲ್ಲಿ ಬರುವ ಅನೇಕ ಹಳ್ಳಿಗಳಿಗೆ ಅನುಕೂಲವಾಗುವಂತೆ ನಾಚಂಕಳ್ಳಿ ಫೀಡರ್ ಚಾನಲ್ ತೆಗೆಯಬೇಕೆಂದು ಅಲ್ಲಿಯ ಜನತೆಯ ಬೇಡಿಕೆ ಇದೆಯೇ ;